

# ಕ್ಲಿಕ್ಕಿಸಿ ಮಾಡುವ ಮುನ್ನ...

**ಎಲ್ಲರೂ ಫೋಟೊ ತೆಗೆಯಬಹುದು; ಆದರೆ ಕ್ಲಿಕ್ಕಿಸಿದ ಎಲ್ಲ ಫೋಟೊಗಳು ಚೆನ್ನಾಗಿರುತ್ತವೆಯೇ? ಖಂಡಿತಾ ಚೆನ್ನಾಗಿರುವುದಿಲ್ಲ. ಹಾಗಾದರೆ ಫೋಟೊ ಚೆನ್ನಾಗಿರಲು ಏನು ಮಾಡಬೇಕು? ವೃತ್ತಿಪರ ಛಾಯಾಗ್ರಾಹಕ ಹಾಗೂ ನುಡಿಚಿತ್ರ ಬರಹಗಾರರ ಅನುಭವದ ಮಾತುಗಳನ್ನು ಕೇಳಿ.**

■ ಶಿವು ಕೆ.

**‘ಸರ್, ತುಸು ಪಕ್ಕಕ್ಕೆ ಸರಿಯುವಿರಾ?’**

ಮಾತು ಕೇಳಿಬಂದ ಕಡೆಗೆ ತಿರುಗಿ ನೋಡಿದೆ. ಚೆಂದಕ್ಕೆ ಮೇಕಪ್ ಮಾಡಿಕೊಂಡಿದ್ದ ಹುಡುಗಿ, ಆಕೆಯ ಮೂವರು ಗೆಳತಿಯರು ಮತ್ತು ಇಬ್ಬರು ಗೆಳೆಯರು ಕಣ್ಣಿಗೆ ಬಿದ್ದರು. ಅವರ ಸೆಲ್ಫಿ ಸಂಭ್ರಮಕ್ಕೆ ನಾನು ಅಡ್ಡವಾಗಿದ್ದೆ. ದುಬಾರಿ, ವೃತ್ತಿಪರ ಕ್ಯಾಮೆರಾ ಮತ್ತು ಲೆನ್ಸುಗಳೊಂದಿಗೆ ಮದುವೆ ಆರತಕ್ಷತೆಯ ಫೋಟೊಗ್ರಫಿ ಮಾಡುತ್ತಿದ್ದ ನನ್ನನ್ನು ಅವರ ಸೆಲ್ಫಿ ಆಸೆ ಪಕ್ಕಕ್ಕೆ ಸರಿಸಿತ್ತು. ಸೊಟ್ಟ ಕುತ್ತಿಗೆ, ಹೊರಚಾಚಿದ ನಾಲಿಗೆ, ಸೊಟ್ಟ ಬಾಯಿ, ತುಟಿಕಚ್ಚಿದ ಮುಖದಲ್ಲಿ ಹಾರಿದ ಹುಬ್ಬು. ಈ ಹೆಣ್ಣುಮಕ್ಕಳ ಸೆಲ್ಫಿ ಸಂಭ್ರಮವನ್ನು ಹಾಗೆಯೇ ಗಮನಿಸಿದೆ. ಪೋಸು ಕೊಡುವುದರಲ್ಲಿ ಹುಡುಗರೂ ಕಡಿಮೆ ಇರಲಿಲ್ಲ ಅನ್ನಿ. ಹತ್ತಾರು ಸೆಲ್ಫಿ ಕ್ಲಿಕ್ಕಿಸಿದರು. ‘ಇದು ಚೆನ್ನಾಗಿದೆ, ಅದು ಚೆನ್ನಾಗಿದೆ’ ಎನ್ನುತ್ತಾ ಕೆಲವನ್ನು ಅಲ್ಲಿಯೇ ಫೇಸ್‌ಬುಕ್, ಇನ್‌ಸ್ಟಾಗ್ರಾಮ್, ವಾಟ್ಸ್ಯಾಪ್‌ಗಳಲ್ಲಿ ಶೇರ್ ಮಾಡಿದರು. ಲೈಕು, ಇಮೋಜಿ, ಕಾಮೆಂಟ್‌ಗಳನ್ನು ಸಂಭ್ರಮಿಸಿದರು. ‘ದಯವಿಟ್ಟು ಸ್ವಲ್ಪ ಅತ್ತ ಕಡೆ ಸರಿಯಿರಿ, ನಾನು ಫೋಟೊ ಕ್ಲಿಕ್ಕಿಸಬೇಕಿದೆ’ ಎಂದೆ. ಅವರೆಲ್ಲರೂ ವಾಸ್ತವ ಜಗತ್ತಿಗೆ ಬಂದು ನನಗೆ ಜಾಗ ಮಾಡಿಕೊಟ್ಟರು.

ಮದುವೆಯಲ್ಲಿ ತಾಳಿ ಕಟ್ಟುವ ಸಮಯ, ಹುಟ್ಟುಹಬ್ಬದಲ್ಲಿ ಕೇಕ್ ಕತ್ತರಿಸುವ ಸಂದರ್ಭ, ಪುಸ್ತಕ ಬಿಡುಗಡೆ ಸನ್ನಿವೇಶ– ಇಂಥ ಕಾರ್ಯಕ್ರಮಗಳಲ್ಲಿ ವೃತ್ತಿಪರ ಛಾಯಾಗ್ರಾಹಕರ